ಕರ್ನಾಟಕ ಅರಣ್ಯ ಇಲಾಖೆ

**ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ**

ದೂರವಾಣಿ ಸಂಖ್ಯೆ: 0831-2467071 ಇ-ಮೇಲ್: dcfbgm@gmail.com

ಸಂ: ಡಿ1/ಲ್ಯಾಂಡ/ಎಫ್‌ಸಿ-40060/ಸಿಆರ್-07/2020-21 ದಿನಾಂಕ: 10-11-2021

ಇವರಿಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಬೆಳಗಾವಿ ವೃತ್ತ, ಬೆಳಗಾವಿ.

ಮಾನ್ಯರೇ,

ವಿಷಯ: Construction of Foot Bridge across a local Nala on alternative pathway connecting from Nersa village to Kongala and Gavali village in Khanapur taluka.
**Proposal No. FP/KA/Aprroach/40060/2019**

ಉಲ್ಲೇಖ:
1. ತಮ್ಮ ಕಛೇರಿ ಪತ್ರ ಸಂಖ್ಯೆ: ಎ7/ಎಲ್‌ಎನ್‌ಡಿ/ಅ(ಸಂ)ಪ್ರ/ಬಿಜಿಎಂ/ಎನ್‌ಕೆಜೆ/ಸಿಆರ್- /2020-21 ದಿನಾಂಕ: 04-12-2020.
2. ವಲಯ ಅರಣ್ಯ ಅಧಿಕಾರಿ, ಲೋಂಡಾ ಇವರ ಕಛೇರಿ ಪತ್ರ ಸಂಖ್ಯೆ:ವಅಅ/ಲೋಂಡಾ/163/2020-21,ದಿನಾಂಕ:08-12-2020, 25-08-2021 ಹಾಗೂ 26-10-2021.
3. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ಇವರ ಕಛೇರಿ ಪತ್ರ ಸಂಖ್ಯೆ: ಸಅಸಂ/ಖಾಉವಿ/ಭೂಮಿ/ನೇರಸಾ ಫೂಟ ಬ್ರಿಜ್/21-22/415, ದಿನಾಂಕ: 28-10-2021.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ತಮ್ಮ ಕಛೇರಿ ಪತ್ರದಡಿ ತಿಳಿಸಲಾಗಿರುವ ನ್ಯೂನ್ಯತೆಗಳಿಗೆ ಉಲ್ಲೇಖ (2) ಮತ್ತು (3) ರಡಿ ವಲಯ ಅರಣ್ಯ ಅಧಿಕಾರಿ, ಲೋಂಡಾ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ರವರಿಂದ ವರದಿ ಪಡೆದು ಈ ಕೆಳಗಿನಂತೆ ಸಲ್ಲಿಸಿದೆ.

| ಅ.ನಂ | ನ್ಯೂನ್ಯತೆಗಳು | ಉತ್ತರ |
|---|---|---|
| 1 | ಉಪಯೋಗಿ ಸಂಸ್ಥೆಯವರು ಬೇಡಿಕೆ ಸಲ್ಲಿಸಿರುವ ಅರಣ್ಯ ಪ್ರದೇಶದ ಗಡಿ ಗುರುತುಗಳನ್ನು ಸ್ಥಾನಿಕವಾಗಿ ಗುರುತಿಸಿದ್ದು ಇರುವುದಿಲ್ಲ. | ಸ್ಥಾನಿಕವಾಗಿ ಗಡಿ ಗುರುತು ಮಾಡಲಾಗಿದೆ. |
| 2 | ಪ್ರಸ್ತಾಪಿತ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತೀರಿ. ಆದರೆ ನೇರಸಾ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುತ್ತದೆ. | ಪ್ರಸ್ತಾಪಿತ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದ ವ್ಯಾಪ್ತಿಗೆ ಒಳಪಡುತ್ತದೆ. |
| 3 | ಪ್ರಸ್ತಾಪಿತ ಅರಣ್ಯ ಪ್ರದೇಶವು ಭೀಮಗಡ ವನ್ಯಜೀವಿ ಧಾಮದ ಸೂಕ್ಷ್ಮ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ತಿಳಿಸಿರುತ್ತೀರಿ, ಆದರೆ ಸದರಿ ವನ್ಯಜೀವಿ ಧಾಮದ ಸುತ್ತಲೂ 10 ಕಿ.ಮೀ ವ್ಯಾಪ್ತಿ ಮಾನ್ಯ ಸರ್ವೋಚ್ಛ ನ್ಯಾಯಾಲಯ ಆದೇಶದ ಪ್ರಕಾರ ಸೂಕ್ಷ್ಮ ಅರಣ್ಯ ಪ್ರದೇಶವೆಂದು ಪರಿಗಣಿಸಲಾಗಿರುತ್ತದೆ. ಈ ಬಗ್ಗೆ ಪ್ರಸ್ತಾವನೆಯನ್ನು ಮರು ಪರಿಶೀಲಿಸುವುದು. | ಪ್ರಸ್ತಾವನೆಯನ್ನು ಮರು ಪರಿಶೀಲಿಸಲಾಗಿ ಪ್ರಸ್ತಾಪಿತ ಅರಣ್ಯ ಪ್ರದೇಶವು ಭೀಮಗಡ ವನ್ಯಜೀವಿ ಧಾಮದ ಪರಿಸರ ಸೂಕ್ಷ್ಮ ವಲಯ ಪ್ರದೇಶ ವ್ಯಾಪ್ತಿಗೆ ಒಳಪಡುತ್ತದೆ. |

| | | |
|---|---|---|
| 4 | ಉಪಯೋಗಿ ಸಂಸ್ಥೆಯವರು ಕಾಮಗಾರಿವಾರು ಸಲ್ಲಿಸಿರುವ ಅರಣ್ಯ ಪ್ರದೇಶದ ವಿವರಕ್ಕೆ ವಲಯ ಅರಣ್ಯ ಅಧಿಕಾರಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸಿದ್ದು ಇರುವುದಿಲ್ಲ. | ವಲಯ ಅರಣ್ಯ ಅಧಿಕಾರಿ, ಲೋಂಡಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಖಾನಾಪೂರ ಹಾಗೂ ಈ ಕೆಳಸಹಿದಾರರ ಸಹಿಯೊಂದಿಗೆ ದೃಢೀಕರಿಸಿ ಸಲ್ಲಿಸಿದೆ. |
| 5 | ಜಿಲ್ಲಾಧಿಕಾರಿಗಳಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರ ಪಡೆದು ಸಲ್ಲಿಸಿದ್ದು ಇರುವುದಿಲ್ಲ. | ಉಪಯೋಗಿ ಸಂಸ್ಥೆಯವರು ಜಿಲ್ಲಾಧಿಕಾರಿ, ಬೆಳಗಾವಿ ರವರಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸಿದ್ದು ಅದನ್ನು ಈ ಪತ್ರಕ್ಕೆ ಲಗತ್ತಿಸಿ ಸಲ್ಲಿಸಿದೆ. |
| 6 | ಉಪಯೋಗಿ ಸಂಸ್ಥೆಯವರು ಎಫ್.ಆರ್.ಎ ಪ್ರಮಾಣ ಪತ್ರವನ್ನು ನಂತರದಲ್ಲಿ ಸಲ್ಲಿಸುವುದಾಗಿ ಮುಚ್ಚಳಿಕೆ ಪತ್ರವನ್ನು ಬರೆದು ಕೊಟ್ಟಿರುವುದಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ದೃಢೀಕರಿಸಿ ಸಲ್ಲಿಸಿದ್ದು ಇರುವುದಿಲ್ಲ. | ಮುಚ್ಚಳಿಕೆ ಪತ್ರಕ್ಕೆ ದೃಢೀಕರಿಸಿ ಲಗತ್ತಿಸಿ ಸಲ್ಲಿಸಿದೆ. |

ಕಾರಣ, ಸದರಿ ಪ್ರಸ್ತಾವನೆಯನ್ನು Web portal www.parivesh.nic.in DCF Login Part-II ನಲ್ಲಿ ಅಗತ್ಯ ಮಾಹಿತಿಯನ್ನು ಭರ್ತಿ ಮಾಡಿ ಅದರ ಹಾರ್ಡ ಪ್ರತಿಯನ್ನು ಹಾಗೂ ಉಪಯೋಗಿ ಸಂಸ್ಥೆಯವರಿಂದ ಸ್ವೀಕೃತವಾದ ಪ್ರಸ್ತಾವನೆಯ 4 ಪ್ರತಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಮುಂದಿನ ಕ್ರಮದ ಕುರಿತು ತಮಗೆ ಗೌರವಪೂರ್ವಕ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ, ಬೆಳಗಾವಿ.

**ಕರ್ನಾಟಕ ಅರಣ್ಯ ಇಲಾಖೆ**

**ವಲಯ ಅರಣ್ಯ ಅಧಿಕಾರಿಗಳ ಕಚೇರಿ, ಪ್ರಾದೇಶಿಕ ವಲಯ, ಲೋಂಡಾ- 591301**

**ಕ್ರ.ಸಂ/ವಅಅ/ಲೋಂಡಾ** /Nersa foot bridge/ FC / **2021-22**/187 **ದಿನಾಂಕ: 25-08-2021**

ಇವರಿಗೆ,

ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಖಾನಾಪೂರ ಉಪ ವಿಭಾಗ, ಖಾನಾಪೂರ

**ಮಾನ್ಯರೇ,**

ವಿಷಯ : Construction of Forest Bridge across a local Nala on alternative pathway connecting from Nersa village to Kongala and Gavali village in Khanapur tq
**Proposal No. FP/KA/Aprroach/400603/2019**

ಉಲ್ಲೇಖ: 1) ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವೃತ್ತ, ಬೆಳಗಾವಿರವರ ಕಚೇರಿ ಪತ್ರಸಂಖ್ಯೆ:ಎ7/ಎಲಎನಡಿ/ಅ(ಸಂ)ಪ್ರ/ಬಿಜೆಎಮ/ಎನಕೆಜಿ/ಸಿಆರ್/2020-21ದಿ:04-12-2020

2) ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವಿಭಾಗ, ಬೆಳಗಾವಿರವರ ಕಚೇರಿ ಪತ್ರ ಸಂಖ್ಯೆ: ಡಿ1/ಲ್ಯಾಂಡ/ಎಫಸಿ-40060/ಸಿಆರ-07/2020-21/2884 ದಿ: 12-08-2021

3) ಈ ಕಚೇರಿ ಪತ್ರ ಸಂ; ಕ್ರಮ ಸಂ/ವಅಅ/ಲೋಂಡಾ/ Nersa foot bridge/ FC / 2021-22 ದಿ: 24-08-2021

4) ಈ ಕಚೇರಿ ಪತ್ರ ಸಂ; ಕ್ರಮ ಸಂ/ವಅಅ/ಲೋಂಡಾ/ Nersa foot bridge/ FC / 2021-22/175 ದಿ: 19-09-2021

*****–

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವರದಿಸಲ್ಲಿಸುವುದೇನೆಂದರೆ, ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವೃತ್ತ, ಬೆಳಗಾವಿರವರು ದಿನಾಂಕ: 02-12-2020ರಂದು ಪ್ರಸ್ತಾಪಿತ ಅರಣ್ಯ ಪ್ರದೇಶವನ್ನು ಪರಿಶೀಲಿಸಿ ನ್ಯೂನ್ಯತೆಗಳನ್ನು ಸರಿಪಡಿಸಿ ಸಲ್ಲಿಸಲು ಉಲ್ಲೇಖದ ಪತ್ರದಲ್ಲಿ ಸೂಚಿಸಿದಂತೆ ಸದರ ಸ್ಥಳವನ್ನು ಮತ್ತೂಮ್ಮೆ ಪರಿಶೀಲಿಸಿ ಈ ಕೆಳಗಿನಂತೆ ವರದಿಸಲಾಗಿದೆ.

1. ಉಪಯೋಗಿ ಸಂಸ್ಥೆಯವರು ಬೇಡಿಕೆ ಸಲ್ಲಿಸಿರುವ ಅರಣ್ಯ ಪ್ರದೇಶದ ಗಡಿ ಗುರುತುಗಳನ್ನು ಸ್ಥಾನಿಕವಾಗಿ ಗುರ್ತಿಸಿ ಪ್ರತಿ 20 ಮೀಟರಗೆ ಒಂದು ಸಿಮೆಂಟ್ ಕಂಬವನ್ನು ನೆಡಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಖಾನಾಪೂರರವರಿಗೆ ಉಲ್ಲೇಖ (3)ರ ಪತ್ರದಲ್ಲಿ ತಿಳಿಸಲಾಗಿದೆ.
2. ಪ್ರಸ್ತಾಪಿತ ಅರಣ್ಯ ಪ್ರದೇಶವು ಆನೆ ಕಾರಿಡಾರ ಪ್ರದೇಶದಲ್ಲಿ ಬರುತ್ತದೆ.



285
17/09

3. ಸದರಿ ಪ್ರಸ್ತಾವಣೆಯನ್ನುಮರು ಪರಿಶೀಲಿಸಲಾಗಿ ಪ್ರಸ್ತಾಪಿತ ಅರಣ್ಯ ಪ್ರದೇಶವು ಭೀಮಗಡ ವನ್ಯಜೀವಿ ಧಾಮದ ಸೂಕ್ಷ್ಮ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತದೆ.
4. ಉಪಯೋಗಿ ಸಂಸ್ಥೆಯವರು ಕಾಮಗಾರಿವಾರು ಸಲ್ಲಿಸಿರುವ ಅರಣ್ಯ ಪ್ರದೇಶದ ವಿವರಕ್ಕೆ ಈ ಕೆಳ ಸಹಿದಾರರು ಧೃಡಿಕರಿಸಿ ಉಲ್ಲೇಖ (4)ರ ಪತ್ರದಲ್ಲಿ ತಮ್ಮ ಕಚೇರಿಗೆ ಸಲ್ಲಿಸಲಾಗಿರುತ್ತದೆ..
5. ಜಿಲ್ಲಾಧಿಕಾರಿಯಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.
6. ಅನ್ವಯಿಸುವುದಿಲ್ಲ.

ಮುಂದುವರೆದು ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು **Proposal No. FP/KA/Aprroach/400603/2019**ರ ಅನುಸಾರವಾಗಿ ಒಂದೇ ಪ್ರಸ್ತಾವಣೆಯ ಮುಖಾಂತರ ಎರಡು ಸೇತುವೆಗಳನ್ನು ನಿರ್ಮಾಣ ಮಾಡುವುದಾಗಿ ತಿಳಿಸಿರುತ್ತಾರೆ ಎಂಬ ವಿಷಯವನ್ನು ತಮ್ಮಲ್ಲಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿಕ
ಸಹಿ /-
ವಲಯ ಅರಣ್ಯ ಅಧಿಕಾರಿ
ಪ್ರಾದೇಶಿಕ ವಲಯ, ಲೋಂಡಾ

ಪ್ರತಿಯನ್ನು ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವಿಭಾಗ, ಬೆಳಗಾವಿರವರಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ವಲಯ ಅರಣ್ಯ ಅಧಿಕಾರಿ
ಪ್ರಾದೇಶಿಕ ವಲಯ, ಲೋಂಡಾ

3100 8/9/21
07 SEP 2021

ಕರ್ನಾಟಕ ಅರಣ್ಯ ಇಲಾಖೆ

ವಲಯ ಅರಣ್ಯ ಅಧಿಕಾರಿಗಳ ಕಚೇರಿ, ಪ್ರಾದೇಶಿಕ ವಲಯ, ಲೋಂಡಾ- 591301

**ಕ್ರ.ಸಂ/ವಅಅ/ಲೋಂಡಾ** / Nersa foot bridge/ FC / **2021-22** / 235 **ದಿನಾಂಕ: 26-10-2021**

ಇವರಿಗೆ,

ಮಾನ್ಯ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು

ಖಾನಾಪೂರ ಉಪ ವಿಭಾಗ, ಖಾನಾಪೂರ

ಮಾನ್ಯರೇ,

ವಿಷಯ : Construction of Forest Bridge across a local Nala on alternative pathway connecting from Nersa village to Kongala and Gavali village in Khanapur tq **Proposal No. FP/KA/Aprroach/400603/2019**

ಉಲ್ಲೇಖ: 1) ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವೃತ್ತ, ಬೆಳಗಾವಿರವರ ಕಚೇರಿ ಪತ್ರಸಂಖ್ಯೆ:ಎ7/ಎಲಎನಡಿ/ಅ(ಸಂ)ಪ್ರ/ಬಿಜಿಎಮ/ಎನಕೆಜಿ/ಸಿಆರ್/2020-21ದಿ:04-12-2020

2) ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವಿಭಾಗ, ಬೆಳಗಾವಿರವರ ಕಚೇರಿ ಪತ್ರ ಸಂಖ್ಯೆ: ಡಿ1/ಲ್ಯಾಂಡ/ಎಫಸಿ-40060/ಸಿಆರ-07/2020-21/2884 ದಿ: 12-08-2021

3) ಮಾನ್ಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಉಪ ವಿಭಾಗ ಖಾನಾಪೂರವರ ಕಚೇರಿ ಪತ್ರ ಸಂಖ್ಯೆ: ಲೋಇ/ಉವಿ/ಖಾ/ಅರಣ್ಯ/2020-21/721 ದಿ: 22-10-2021

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮ್ಮಲ್ಲಿ ವರದಿಸಲ್ಲಿವುದೇನೆಂದರೆ, ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಬೆಳಗಾವಿ ವೃತ್ತ, ಬೆಳಗಾವಿರವರು ದಿನಾಂಕ: 02-12-2020ರಂದು ಪ್ರಸ್ತಾಪಿತ ಅರಣ್ಯ ಪ್ರದೇಶವನ್ನು ಪರಿಶೀಲಿಸಿ ಸದರಿ ಫೂಟ್ ಬ್ರೀಡ್ಜ್ ನಿರ್ಮಾಣಕ್ಕಾಗಿ ಬೇಡಿಕೆ ಸಲ್ಲಿಸಿರುವ ಸ್ಥಳದಲ್ಲಿ ಯಾವುದೇ ಯಾವುದೇ ಗಡಿ ಗುರುತುಗಳನ್ನು ಗುರುತಿಸಿರುವುದಿಲ್ಲವೆಂದು ಆಕ್ಷೇಪಣೆ ವ್ಯಕ್ತಪಡಿಸಿದನ್ವಯ ಉಲ್ಲೇಖಿತ ಪತ್ರ ಸಂಖ್ಯೆ 03ರ ಪ್ರಕಾರ ಸದರಿ ಕಾಮಗಾರಿಗಳ ಗಡಿಗಳನ್ನು ಸ್ಥಾನಿಕವಾಗಿ ಗುರುತಿಸಿ ಸಿ.ಸಿ ಕಂಬಗಳನ್ನು ಅಳವಡಿಸಿದ ಬಗ್ಗೆ ಛಾಯಾ ಚಿತ್ರದೊಂದಿಗೆ ಈ ಕಚೇರಿಗೆ ಸಲ್ಲಿಸಿರುತ್ತಾರೆ. ಸದರಿ ಗಡಿಗಳನ್ನು ಗುರುತಿಸಿ ಸಿ.ಸಿ ಕಂಬಗಳನ್ನು ಅಳವಡಿಸಿದ ಛಾಯಾ ಚಿತ್ರದ ಪ್ರತಿಯನ್ನು ಈ ಪತ್ರಕ್ಕೆ ಲಗ್ತ ಇಟ್ಟು ತಮ್ಮಲ್ಲಿ ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿಕ

ವಲಯ ಅರಣ್ಯ ಅಧಿಕಾರಿ

ಲೋಂಡಾ ವಲಯ, ಲೋಂಡಾ

ಅರಣ್ಯ ಸಂರಕ್ಷಣಾಧಿಕಾರಿಗಳ
ಬೆಳಗಾವಿ ವಿಭಾಗ, ಬೆಳಗಾವಿ
3973 30-10-2021 ಖಾ ಉ
29 OCT 2021
ಸಂಖ್ಯೆ

Range Office Londa\FC ಖಾ\FC ಮಾ.ಕ್ಸ

396 08/11

ಕ್ರಸಂಖ್ಯೆ.ಸಅಸಂ/ಖಾಉವಿ/ಭೂಮಿ/ನೇರಸಾಫೂಟ ಬ್ರಿಜ್/21-22/415

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ
ಖಾನಾಪೂರ ಉಪ ವಿಭಾಗ, ಖಾನಾಪೂರ
ದಿನಾಂಕ. 28--10--2021.

ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಳಗಾವಿ ವಿಭಾಗ ಬೆಳಗಾವಿ.ರವರ ಸನ್ನಿಧಿಗೆ ನಾನು ದಿನಾಂಕ 17-10-2021 ರಂದು ಸದರಿ ನೇರಸಾ ದಿಂದ ಕೊಂಗಳ ಮತ್ತು ಗವಾಳಿ ಫೂಟ ಬ್ರಿಜ್‌ನ್ನು ಪರಿಶೀಲಿಸಿರುತ್ತೇನೆ. ವಲಯ ಅರಣ್ಯ ಅಧಿಕಾರಿ ಲೋಂಡಾ ಇವರ ವರದಿಯು ಸಮಂಜಸವಾಗಿದ್ದು, ಕ್ಷೇತ್ರದಲ್ಲಿ ಗಡಿ ಗುರುತುಗಳನ್ನು ಹಾಕಿದ್ದು ವಲಯ ಅರಣ್ಯ ಅಧಿಕಾರಿ ಲೋಂಡಾ ಇವರ ವರದಿ ಹಾಗೂ ಛಾಯಾ ಚಿತ್ರಗಳನ್ನು ಈ ಲಗ್ತವಿಟ್ಟು ತಮ್ಮಲ್ಲಿ ಗೌರವದೊಂದಿಗೆ ಸಲ್ಲಿಸಿದೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಖಾನಾಪೂರ ಉಪ ವಿಭಾಗ, ಖಾನಾಪೂರ

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

Phone No: 08336-222473
Email ID: aeepwdknp3@gmail.com

ಕ್ರ.ಸಂ/ಲೋಇ/ಉವಿ/ಖಾ/ಅರಣ್ಯ/2020-21/721

ಇವರ ಕಾರ್ಯಾಲಯ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಉಪ ವಿಭಾಗ ಖಾನಾಪೂರ
ದಿನಾಂಕ:- 22/10/2021

ವಲಯ ಅರಣ್ಯಾಧಿಕಾರಿಗಳು
ವಲಯ ಲೋಂಡಾ
ಖಾನಾಪೂರ ತಾಲೂಕಾ ಬೆಳಗಾವಿ
ಇವರಿಗೆ,

ಮಾನ್ಯರೇ,

ವಿಷಯ: ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ನೆರಸಾದಿಂದ ಕೊಂಗಳಾ ಮೂಲಕ ಗವಾಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂ ಸ್ಥಾನಿಕ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಕಾಮಗಾರಿ ಕುರಿತು.

ಉಲ್ಲೇಖ:
1. ಫಾರೆಸ್ಟ್ ಕ್ಲಿಯರೆನ್ಸ್ ಸಂ. FP/KA/Approach/40060/2019
2. ತಮ್ಮ ಕಛೇರಿ ಪತ್ರ ಸಂ: ವಅ/ಲೋಂಡಾ/Nersa foot bridge/FC/2021-22 ದಿನಾಂಕ :- 24-08-2021

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಬೆಳಗಾವಿ ಜಿಲ್ಲೆಯ ಖಾನಾಪೂರ ತಾಲೂಕಿನ ನೆರಸಾದಿಂದ ಕೊಂಗಳಾ ಮೂಲಕ ಗವಾಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂ ಸ್ಥಾನಿಕ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಕಾಮಗಾರಿಗೆ 0.11 ಹೆಕ್ಟರ್ ಅರಣ್ಯ ಭೂಮಿಯನ್ನು ಮಂಜೂರು ಮಾಡುವ ಸಲುವಾಗಿ ಉಲ್ಲೇಖ (1) ರಡಿ ಆನಲೈನ್ ಮುಖಾಂತರ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು.

ಮುಂದುವರೆದು ಉಲ್ಲೇಖಿತ ಪತ್ರ (2) ರಲ್ಲಿ ಪ್ರಸ್ತಾಪಿತ ಅರಣ್ಯ ಪ್ರದೇಶದ ಸ್ಥಾನಿಕವಾಗಿ ಗಡಿಗಳನ್ನು ಗುರುತಿಸಿ ಸಿಮೆಂಟ ಕಂಬಗಳನ್ನು ಅಳವಡಿಸಲು ತಿಳಿಸಿರುತ್ತೀರಿ. ಅದರಂತೆ ಸದರಿ ಕಾಮಗಾರಿಗಳ ಗಡಿಗಳನ್ನು ಸ್ಥಾನಿಕವಾಗಿ ಗುರುತಿಸಿ ಸಿ.ಸಿ ಕಂಬಗಳನ್ನು ಅಳವಡಿಸಲಾಗಿದ್ದು, ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಲಾಗಿದೆ.

ಅಡಕ : ಛಾಯಾಚಿತ್ರ

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಉಪ ವಿಭಾಗ ಖಾನಾಪೂರ

ವಲಯ ಅರಣ್ಯ ಅಧಿಕಾರಿಗಳ ಕಛೇರಿ, ಲೋಂಡಾ
ಸ್ವೀಕೃತ ಸಂಖ್ಯೆ ..........
ದಿನಾಂಕ 26/10/2021

26/10/21












ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಉಪ ವಿಭಾಗ ಖಾನಾಪೂರ




22 Oct 2021 13:06:37



ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕ್ರ.ಸಂ/ಲೋಇ/ವಿ/ಬೆ/ಎಇ-2/2021-22/1525

ಇವರ ಕಾರ್ಯಾಲಯ
ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ ಬೆಳಗಾವಿ

ದಿನಾಂಕ:- 15 JUL 2021

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೆಳಗಾವಿ ವಿಭಾಗ ಬೆಳಗಾವಿ
ಇವರಿಗೆ,

ಮಾನ್ಯರೇ,

ವಿಷಯ:- Construction of Foot Bridge across a local Nala on alternative pathway connecting from Nersa village to Kongala and Gavali village in Khanapur Taluka

ಉಲ್ಲೇಖ:-
1) ಸರಕಾರದ ಪತ್ರ ಕ್ರ.ಸಂ: ಲೋ.ಇ 118 ಸಿಬಿಆರ್ 2018 ದಿ: 22-12-2018
2)ಈ ಕಚೇರಿ ಪತ್ರ ಸಂ:ಲೋಇ/ಬೆವಿ/ಅಂಪ/ಸಇಂ-06/2020-21/1587 ದಿ:28-07-2020
3)ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಬೆಳಗಾವಿ ವಿಭಾಗ ಬೆಳಗಾವಿ ಇವರ ಕಛೇರಿ ಪತ್ರ ಸಂ: ಡಿ1/ಲ್ಯಾಂಡ/ಎಫ್‌ಸಿ-40060/ಸಿಆರ್-07/2020-21/3164 ದಿ: 11-12-2020
4) ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ ಬೆಳಗಾವಿ ಇವರ ಪತ್ರ ಸಂ: ಕಂಶಾ/ಲೋಇ/ವಿವ-01/2021-22 ದಿ: 05.07.2021
5)ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಲೋಕೋಪಯೋಗಿ ಇಲಾಖೆ ಉಪ ವಿಭಾಗ ಖಾನಾಪೂರ ಇವರ ಕಛೇರಿ ಪತ್ರ ಸಂ:- 295 ದಿ:- 14-07-2021

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ. ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ಅರಣ್ಯ ಪ್ರದೇಶದ ಹಾಗೂ ಗ್ರಾಮೀಣ ಜನರ ಶಾಲಾ-ಕಾಲೇಜ್ ಮಕ್ಕಳಿಗೆ ಹಾಗೂ ಗ್ರಾಮಸ್ಥರಿಗೆ ತಾಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಮಳೆಗಾಲದಲ್ಲಿ ಸಂಚರಿಸಲು ಬಹಳ ತೊಂದರೆಯಾಗುತ್ತಿರುವ ಕಾರಣ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ "ಶಾಲಾ ಸಂಪರ್ಕ ಸೇತು" ಯೋಜನೆಯಡಿ ಕಾಲುಸಂಕ (Foot Bridge) ನಿರ್ಮಾಣ ಮಾಡಲು ಉಲ್ಲೇಖ(1) ರನ್ವಯ ಸರ್ಕಾರದಿಂದ ಅನುಮೋದನೆ ನೀಡಿರುತ್ತಾರೆ.

ಬೆಳಗಾವಿ ಜಿಲ್ಲೆ ಖಾನಾಪೂರ ತಾಲೂಕಿನ ನೆರಸಾದಿಂದ ಕೊಂಗಳಾ ಮೂಲಕ ಗವಾಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂ ಸ್ಥಾನಿಕ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಕಾಮಗಾರಿಗೆ 0.11 ಹೆಕ್ಟೇರ್ ಅರಣ್ಯ ಭೂಮಿಯನ್ನು ಮಂಜೂರು ನೀಡಲು ಅರಣ್ಯ ಇಲಾಖೆಯ ಆನಲೈನ್ ಮೂಖಾಂತರ ಸಲ್ಲಿಸಿದ ಪ್ರಸ್ತಾವನೆಯನ್ನು ಈಗಾಗಲೇ ಉಲ್ಲೇಖಿತ ಪತ್ರ (2) ರಡಿ ತಮಗೂ ಕೂಡಾ ಸಲ್ಲಿಸಲಾಗಿರುತ್ತದೆ. ಮುಂದುವರೆದು ಉಲ್ಲೇಖಿತ ಪತ್ರ (3) ರಡಿ ತಾವು "ಜಿಲ್ಲಾಧಿಕಾರಿಗಳಿಂದ ಪ್ರಸ್ತಾಪಿತ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರ" ಪಡೆದು ಸಲ್ಲಿಸಲು ಕೋರಿರುತ್ತೀರಿ.

ಅದರಂತೆ ಉಲ್ಲೇಖಿತ ಪತ್ರ (4) ರಡಿ ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ ಬೆಳಗಾವಿ ರವರು ಖಾನಾಪೂರ ತಾಲೂಕಿನ ನೇರಸಾ ಗ್ರಾಮದ ಅರಣ್ಯ ಪ್ರದೇಶದಲ್ಲಿನ ಕೊಂಗಳಾ ಮತ್ತು ಗವಾಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶವು ಅರಣ್ಯ ಪ್ರದೇಶ ಹೊರತುಪಡಿಸಿ ಅರಣ್ಯೇತರ ಪ್ರದೇಶ ಇರುವುದಿಲ್ಲ ಎಂದು ಪ್ರಮಾಣ ಪತ್ರವನ್ನು ನೀಡಿರುತ್ತಾರೆ (ಪ್ರತಿ ಲಗತ್ತಿಸಲಾಗಿದೆ) ಹಾಗೂ ಆನಲೈನ್ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳ ಪ್ರಮಾಣ ಪತ್ರದೊಂದಿಗೆ ಲಗತ್ತಿಸಿ ವರ್ಗಾಯಿಸಿದ್ದು ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಮೂಲಕ ಆದರಪೂರ್ವಕವಾಗಿ ಸಲ್ಲಿಸಲಾಗಿದೆ.

ಅಡಕ:- ಜಿಲ್ಲಾಧಿಕಾರಿಗಳ ಪ್ರಮಾಣ ಪತ್ರ-1 ಪ್ರತಿ

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ ಬೆಳಗಾವಿ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಬೆಳಗಾವಿ ವಿಭಾಗ, ಬೆಳಗಾವಿ
1928
17/7/2021
15 JUL 2021

163
22/07

(ಕಂದಾಯ ಇಲಾಖೆ)

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ ಜಿಲ್ಲೆ, ಬೆಳಗಾವಿ-590 001

ದೂರವಾಣಿ: 0831-2407270
email: belgaum.dssp@gmail.com

ನಂ.ಕಂಶಾ/ಲೋಇ/ವಿವ-01/2021-22

ದಿನಾಂಕ: 5.06.2021

ಇವರಿಗೆ,
ಕಾರ್ಯನಿರ್ವಾಹಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ಬೆಳಗಾವಿ ವಿಭಾಗ, ಬೆಳಗಾವಿ

| | |
|---|---|
| ಕಾರ್ಯಕಾರಿ ಅಭಿಯಂತರರು | |
| ತಾ. ಸ. | |
| ಅಧೀಕ್ಷಕರು | |
| ಟೆ. ಅಧೀಕ್ಷಕರು | |
| ವಿ. ನಿರ್ವಾಹಕರು | |
| ಒಳಬಂದ ಸಂಖ್ಯೆ | |
| ದಿನಾಂಕ | |

ವಿಷಯ: Construction fo Foot Bridge across a local Nala on alternative pathway connection from Nersa village to Kongala and Gavali Village in Khanapur Taluka

ಉಲ್ಲೇಖ:1) ತಮ್ಮ ಕಾರ್ಯಾಲಯದ ಪತ್ರ ಸಂಖ್ಯೆ:ಕ್ರ.ಸಂ.ಲೋಇ/ವಿ/ಬೆ/ಎಇ-2/2020 ದಿ:06.03.2021

2) ಉಪವಿಭಾಗಾಧಿಕಾರಿಗಳು, ಬೆಳಗಾವಿ ಉಪವಿಭಾಗ, ಬೆಳಗಾವಿ ಇವರ ಪತ್ರದ ಸಂಖ್ಯೆ:ಕ್ರ.ಎಲ್.ಎನ್.ಡಿ/ಸಿಆರ್/12/2021-22 ದೊ:08.06.2021

3) ತಹಶೀಲ್ದಾರ್ ಖಾನಾಪೂರ, ಇವರ ಪತ್ರದ ಸಂ:ನಂ/ಎಲ್.ಎನ್.ಡಿ/ಸಿಆರ್ 15/2021-22 ದಿ:15.05.2021

*********

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1) ರ ತಮ್ಮ ಪತ್ರದಲ್ಲಿ ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಅರಣ್ಯ ಪ್ರದೇಶದ ಹಾಗೂ ಗ್ರಾಮೀಣ ಜನರ ಶಾಲಾ-ಕಾಲೇಜ್ ಮಕ್ಕಳಿಗೆ ಹಾಗೂ ಗ್ರಾಮಸ್ಥರು ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಿಗೆ ಮಳೆಗಾಲದಲ್ಲಿ ಸಂಚರಿಸಲು ಬಹಳ ತೊಂದರೆಯಾಗುತ್ತಿರುವ ಕಾರಣ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಯಾದ "ಶಾಲಾ ಸಂಪರ್ಕ ಸೇತು" ಯೋಜನೆಯಡಿ ನಾಲಾಗೆ ಅಡ್ಡಲಾಗಿ ಕಾಲುಸಂಕ ನಿರ್ಮಾಣ ಮಾಡಲು ಸರ್ಕಾರದಿಂದ ಅನುಮೋದನೆ ನೀಡಿರುತ್ತಾರೆ. ಕಾರಣ ಖಾನಾಪೂರ ತಾಲ್ಲೂಕಿನ ನೇರಸಾ ಗ್ರಾಮದ ಅರಣ್ಯ ಪ್ರದೇಶದಲ್ಲಿನ ಕೊಂಗಳಾ ಮತ್ತು ಗಾವಳಿ ಗ್ರಾಮಕ್ಕೆ ಸಂಪರ್ಕಿಸುವ ಕಾಲುದಾರಿಗೆ ಭಂಡುರಾ ನಾಲಾಗೆ ಹಾಗೂ ಸ್ಥಾನಿಕ ನಾಲಾಗೆ ಅಡ್ಡಲಾಗಿ ನಿರ್ಮಿಸಲಾಗುತ್ತಿದ್ದು, ಪ್ರಸ್ತಾಪಿತ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತು ಪಡಿಸಿ ಅರಣ್ಯೇತರ ಪ್ರದೇಶ ಇರುವುದಿಲ್ಲಾ. ಆದ್ದರಿಂದ ಸದರಿ ಕಾಮಗಾರಿಗೆ ಅರಣ್ಯ ಪ್ರದೇಶ ಹೊರತುಪಡಿಸಿ ಅರಣ್ಯೇತರ ಪ್ರದೇಶ ಇಲ್ಲದೇ ಇರುವ ಬಗ್ಗೆ ಪ್ರಮಾಣ ಪತ್ರ ನೀಡಲು ವಿನಂತಿಸಿರುತ್ತೀರಿ.

ಈ ಕುರಿತು ವರದಿ ಸಲ್ಲಿಸುವಂತೆ ದಿನಾಂಕ:03.04.2021 ರಂದು ಉಪವಿಭಾಗಾಧಿಕಾರಿಗಳು, ಬೆಳಗಾವಿ ಹಾಗೂ ತಹಶೀಲ್ದಾರ್ ಖಾನಾಪೂರ ಇವರಿಗ ಪತ್ರ ಬರೆಯಲಾಗಿತ್ತು. ಅದರಂತೆ ಉಲ್ಲೇಖ (2) ಹಾಗೂ (3) ರಡಿ ಸಲ್ಲಿಸಿದ ವರದಿಯಲ್ಲಿ, ನೇರಸೆ ಗ್ರಾಮದಿಂದ ಕೊಂಗಳಾ ಹಾಗೂ ಗವಾಳಿ ಗ್ರಾಮಕ್ಕೆ ಕಾಲು ಸೇತುವೆ ನಿರ್ಮಾಣ ಮಾಡಲು ಸರ್ಕಾರವು ಅನುಮೋದನೆ ನೀಡಿದ ಪ್ರಕಾರ ಸದರಿ ಭಂಡೂರಾ ನಾಲಗೆ ಹಾಗೂ ಸ್ಥಾನಿಕ ನಾಲಕ್ಕೆ ಅಕ್ಕ-ಪಕ್ಕ ಅರಣ್ಯ ಇಲಾಖೆಯ ಜಮೀನು ಇರುತ್ತದೆ. ಸದರಿ ನಾಲಾ ಸುತ್ತ ಮುತ್ತ ಅರಣ್ಯೇತರ ಪ್ರದೇಶ ಇರುವುದಿಲ್ಲಾ ಎಂದು ಸ್ಥಳ ತನಿಖಾ ವರದಿಯೊಂದಿಗೆ ಸಲ್ಲಿಸಿರುತ್ತಾರೆ.

ಕಾರಣ ಉಲ್ಲೇಖಿತ (2) ಹಾಗೂ (3) ರ ವರದಿ ಮೇರೆಗೆ ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ನೇರಸಾ ಗ್ರಾಮದ ಅರಣ್ಯ ಪ್ರದೇಶದಲ್ಲಿನ ಕೊಂಗಳಾ ಮತ್ತು ಗಾವಳಿ ಗ್ರಾಮದ ಸುತ್ತಮುತ್ತಲಿನ ಪ್ರದೇಶವು ಅರಣ್ಯ ಪ್ರದೇಶ ಹೊರತುಪಡಿಸಿ ಅರಣ್ಯೇತರ ಪ್ರದೇಶ ಇರುವುದಿಲ್ಲ ಎಂದು ತಿಳಿಸುತ್ತಾ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಜಿಲ್ಲಾಧಿಕಾರಿಗಳು ಬೆಳಗಾವಿ